* ಮುಂದೆ ವಿದ್ಯಾರ್ಥಿಗಳ ಸದಸ್ಯತ್ವ ಶುಲ್ಕ ಪಾವತಿ ನಮೂನೆಯಲ್ಲಿ ಒಟ್ಟು ವಿದ್ಯಾರ್ಥಿಗಳ ಸಂಖ್ಯೆಯನ್ನು ನಮೂದು ಮಾಡಬೇಕು (ಮೊದಲನೇ ಸೆಮಿಸ್ಟರಿನಿಂದ ಕೊನೆಯ ಸೆಮಿಸ್ಟರಿನ ಎಲ್ಲಾ ವಿದ್ಯಾರ್ಥಿಗಳು) ಪ್ರತಿ ವಿದ್ಯಾರ್ಥಿಗೆ ರೂ. 15/- ರಂತೆ ಒಟ್ಟು ಶುಲ್ಕ ಲೆಕ್ಕಿಸಲಾಗುತ್ತದೆ.
* ಹಿಂದಿನ ವರ್ಷಗಳ ವಿದ್ಯಾರ್ಥಿಗಳ ಸದಸ್ಯತ್ವ ಶುಲ್ಕ ಪಾವತಿಸಲು Add year ಎಂಬ ಆಯ್ಕೆಯ ಮೇಲೆ ಕ್ಲಿಕ್ ಮಾಡಬೇಕು. ನಂತರ ಸಂಬಂಧಿಸಿದ ವರ್ಷವನ್ನು ಆಯ್ಕೆ ಮಾಡಿ ಆ ವರ್ಷದ ವಿದ್ಯಾರ್ಥಿಗಳ ಸಂಖ್ಯೆಯನ್ನು ನಮೂದಿಸಬೇಕು. (ಉದಾಹರಣೆ: 2017-18, 2018-19, 2019-20, 2020-21, 2021-22, 2022-23, 2023-24, 2024-25)
* ಹಿಂದಿನ ವರ್ಷ ಯುವ ರೆಡ್‌ಕ್ರಾಸ್ ಘಟಕದಡಿ ನಡೆದ ಕಾರ್ಯಕ್ರಮಗಳ ವರಧಿಯನ್ನು ಅಪ್ಲೋಡ್ ಮಾಡಲು ಆಯ್ಕೆ ನೀಡಲಾಗಿದೆ. ವರದಿ ಇದ್ದಲ್ಲಿ ಅಪ್ಲೋಡ್ ಮಾಡಬಹುದು.
* ಪಾವತಿ ಯಶಸ್ವಿಯಾದ ನಂತರ, ತಾವು ನೀಡಿರುವ ಈಮೇಲ್ ವಿಳಾಸಕ್ಕೆ ಕೂಡಲೇ ನೋಂದಣಿ ಪ್ರಮಾಣ ಪತ್ರ ಮತ್ತು ರಶೀದಿ ಸ್ವಯಂ ಕಳುಹಿಸಲಾಗುತ್ತದೆ.
* ಒಂದು ವೇಳೆ UPI ಮೂಲಕ ಪಾವತಿ ಮಾಡಲು ಸಾಧ್ಯವಾಗದಿದ್ದರೆ, Pay Now ಮೇಲೆ ಕ್ಲಿಕ್ ಮಾಡಿದ ಬಳಿಕ ಬಲಭಾಗದಲ್ಲಿ ನೀಡಿರುವ ಭಾರತೀಯ ರೆಡ್‌ಕ್ರಾಸ್ ಸಂಸ್ಥೆ – ಯುವ ರೆಡ್‌ಕ್ರಾಸ್ ಬ್ಯಾಂಕ್ ಖಾತೆ ಸಂಖ್ಯೆ ನೀಡಲಾಗಿದೆ. ಈ ಬ್ಯಾಂಕ್ ಖಾತೆ ಸಂಖ್ಯೆಗೆ NEFT/IMPS/CASH ಮೂಲಕ ಪಾವತಿಸಿ, ಬ್ಯಾಂಕ್ ನೀಡುವ ಪಾವತಿ ಚಲನ್ ಅನ್ನು ಸಾಫ್ಟ್‌ವೇರ್ ಮೂಲಕ ಅಪ್ಲೋಡ್ ಮಾಡಬೇಕು, ನಂತರ ತಾವು ನೀಡಿರುವ ಈಮೇಲ್ ವಿಳಾಸಕ್ಕೆ ತಕ್ಷಣವೇ ನೋಂದಣಿ ಪ್ರಮಾಣ ಪತ್ರ ಮತ್ತು ರಶೀದಿ ಕಳುಹಿಸಲಾಗುತ್ತದೆ.

| | |
|---|---|
| Bank Name | Canara Bank |
| Account Holder Name | Indian Red Cross Society Youth Red Cross |
| Account Number | 2827101016832 |
| IFSC Code | CNRB0002827 |
| Branch Name | KSFC Complex, Thimmaiah Road Bangalore |

ಈ ಕುರಿತಂತೆ ಯಾವುದೇ ಗೊಂದಲಗಳಿದ್ದಲ್ಲಿ ಈ ಕೆಳಗೆ ನೀಡಿರುವ ದೂರವಾಣಿ ಸಂಖ್ಯೆಗೆ ಸಂಪರ್ಕಿಸುವುದು.

| Name | Designation | Mobile Number |
|---|---|---|
| IRCS KSB | Land line | 080- 22264205 |
| Sri Ananda D G | YRC Coordinator | 8147182172 |
| Ms. Anju J | SDA | 7337852629 |
| Ms. K Vaishnavi | Data Entry Operator | 636248327 |

ದಿನಾಂಕ: 30-12-2025 ರೊಳಗಾಗಿ ನೋಂದಣಿ ಶುಲ್ಕ ರೂ. 1,500/- ಹಾಗೂ ಪ್ರತಿ ವಿದ್ಯಾರ್ಥಿಗೆ ರೂ. 15/- ಎಲ್ಲಾ ಸೆಮಿಸ್ಟರ್ ವಿದ್ಯಾರ್ಥಿ ಶುಲ್ಕವನ್ನು ಭಾರತೀಯ ರೆಡ್‌ಕ್ರಾಸ್ ಸಂಸ್ಥೆಯು ಅಭಿವೃದ್ದಿಪಡಿಸಿರುವ ಸಾಫ್ಟ್‌ವೇರ್ ಮೂಲಕ ಪಾವತಿ ಮಾಡುವಂತೆ ಈ ಮೂಲಕ ಸೂಚಿಸಲಾಗಿದೆ.

ಈ ಮೇಲೆ ನಿಗಧಿ ಮಾಡಿದ ದಿನಾಂಕದೊಳಗಾಗಿ ಪಾವತಿ ಮಾಡದೆ ಇದ್ದರೆ ಮುಂದಿನ ಆಗು ಹೋಗುಗಳಿಗೆ ನೀವೆ ನೇರ ಹೊಣೆಗಾರರಾಗುತ್ತೀರಿ.

ಕುಲಸಚಿವರು

ಕುಲಸಚಿವರು
ಬೆಂಗಳೂರು ನಗರ ವಿಶ್ವವಿದ್ಯಾನಿಲಯ
ಸೆಂಟ್ರಲ್ ಕಾಲೇಜು ಆವರಣ
ಬೆಂಗಳೂರು - 560 001

ಗೆ,

ಎಲ್ಲಾ ಸಂಯೋಜಿತ ಕಾಲೇಜುಗಳ ಪ್ರಾಂಶುಪಾಲರುಗಳು,

ಪ್ರತಿಗಳು:

1. ಮಾನ್ಯ ಕುಲಪತಿಗಳ/ಕುಲಸಚಿವರ/ಕುಲಸಚಿವರು(ಮೌ)/ವಿತ್ತಾಧಿಕಾರಿಗಳ ಆಪ್ತ ಕಾರ್ಯದರ್ಶಿಗಳು, ಬೆಂ.ನ.ವಿ
2. ಪ್ರಧಾನ ಕಾರ್ಯದರ್ಶಿಗಳು, ಭಾರತೀಯ ರೆಡ್‌ಕ್ರಾಸ್ ಸಂಸ್ಥೆ, ಕರ್ನಾಟಕ ರಾಜ್ಯ ಶಾಖೆ, ಬೆಂಗಳೂರು-560001.
3. ನೋಡಲ್ ಅಧಿಕಾರಿಗಳು, ಯುವ ರೆಡ್‌ಕ್ರಾಸ್ ಕೋಶ, ಡಾ. ಮನಮೋಹನ ಸಿಂಗ್ ಬೆಂ.ನ.ವಿ
4. ಕಛೇರಿ ಪ್ರತಿ.

ಡಾ. ಮನಮೋಹನ್ ಸಿಂಗ್
ಬೆಂಗಳೂರು
ನಗರ ವಿಶ್ವವಿದ್ಯಾನಿಲಯ

ಆಗು ನೀ ಅನಿಕೇತನ
BE BOUNDLESS

Dr MANMOHAN SINGH
BENGALURU
CITY UNIVERSITY

Central College Campus, Dr. AmbedkarVeedhi,Bengaluru – 560 001.
Ph.No.080-22961016/080- 22131385 email-registrar@bcu.ac.in

ಸಂಖ್ಯೆ: ಬಿಸಿಯು/ಕುಸಅ/ಯು.ರೆ.ಕ್ರಾ/2025-26/170 R

ದಿನಾಂಕ: 20-12-2025

## ಸುತ್ತೋಲೆ

ವಿಷಯ: ಯುವ ರೆಡ್‌ಕ್ರಾಸ್ ಘಟಕಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಕುರಿತು.

ಉಲ್ಲೇಖ: 1. ಸರ್ಕಾರದ ಆದೇಶ ಸಂಖ್ಯೆ: ಇಡಿ 64 ವಿವಿಧ 2011 ಬೆಂಗಳೂರು ದಿನಾಂಕ: 22-12-2011
2. ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ ಆದೇಶ ಸಂಖ್ಯೆ: ಕಾಶಿಇ/ಶೈವಿ/156/ರೆಡ್‌ಕ್ರಾಸ್/2024-25 ದಿನಾಂಕ: 21-05-2025.
3. ಬಿಸಿಯು/ಕುಸಅ/ಯು.ರೆ.ಕ್ರಾ/2025-26/73A ದಿನಾಂಕ: 02-08-2025.
4. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 19-12-2025.

*****

ಮೇಲೆ ಓದಲಾದ ಉಲ್ಲೇಖ (02) ರಲ್ಲಿ ತಿಳಿಸಿದಂತೆ, ವಿಶ್ವವಿದ್ಯಾನಿಲಯದ ಎಲ್ಲಾ ಸಂಯೋಜಿತ ಕಾಲೇಜುಗಳಲ್ಲಿ ಯುವ ರೆಡ್‌ಕ್ರಾಸ್ ಘಟಕವನ್ನು ಪ್ರಾರಂಭಿಸಬೇಕೆಂದು ಸೂಚಿಸಿರುತ್ತದೆ. ಅದರಂತೆ 2016-17, 2017-18, 2018-19, 2019-20, 2020-21, 2021-22,2022-23, 2023-24, 2024-25 ಮತ್ತು 2025-26ನೇ ಸಾಲಿನಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳು ಸಹ ಯುವ ರೆಡ್‌ಕ್ರಾಸ್ ಘಟಕವನ್ನು ಸ್ಥಾಪಿಸಿ ರೂ. 1,500/- (ರೂ. ಒಂದು ಸಾವಿರದ ಐದು ನೂರು)ಗಳನ್ನು ಭಾರತೀಯ ರೆಡ್‌ಕ್ರಾಸ್ ಸಂಸ್ಥೆ, ಕರ್ನಾಟಕ ರಾಜ್ಯ ಶಾಖೆ, ಬೆಂಗಳೂರು ಇಲ್ಲಿಗೆ ಪಾವತಿಸಿ ನೋಂದಾಯಿಸಿಕೊಳ್ಳುವಂತೆಯು ಮತ್ತು ಕಾಲೇಜಿನ ಪ್ರವೇಶಾತಿ ಸಮಯದಲ್ಲಿ ಪ್ರತಿ ವಿದ್ಯಾರ್ಥಿಗಳಿಂದ ಕಾಲೇಜು ಶುಲ್ಕವನ್ನು ಸಂಗ್ರಹಿಸುವಾಗ ಯುವ ರೆಡ್‌ಕ್ರಾಸ್ ಘಟಕದಡಿಯಲ್ಲಿ ವಾರ್ಷಿಕವಾಗಿ ರೂ. 50/-ನ್ನು ಸಂಗ್ರಹಿಸುವಂತೆ ಹಾಗೂ ಸಂಗ್ರಹಿಸಿದ ಶುಲ್ಕದಲ್ಲಿ ಶೇ. 30% (ರೂ. 15/-) ಅನ್ನು ಭಾರತೀಯ ರೆಡ್‌ಕ್ರಾಸ್ ಸಂಸ್ಥೆ, ಕರ್ನಾಟಕ ರಾಜ್ಯ ಶಾಖೆ, ಬೆಂಗಳೂರು ಇಲ್ಲಿಗೆ ಪಾವತಿಸಿ ಉಳಿದ ಶೇ. 70% (ರೂ. 35/-)ಗಳನ್ನು ಕಾಲೇಜಿನ ಯುವ ರೆಡ್‌ಕ್ರಾಸ್ ಚಟುವಟಿಕೆಗಳಿಗೆ ಬಳಸಿಕೊಳ್ಳುವಂತೆ ಸರ್ಕಾರವು ಆದೇಶಿಸಿರುತ್ತದೆ. ನೋಂದಣಿ ಶುಲ್ಕ ಮತ್ತು ವಿದ್ಯಾರ್ಥಿ ಶುಲ್ಕವನ್ನು ಪಾವತಿಸಲು ಕಾಲೇಜುಗಳಿಗೆ ಅನುಕೂಲವಾಗುವಂತೆ ಸಮಯ, ಹಣ ಮತ್ತು ಮಾನವ ಶ್ರಮವನ್ನು ಉಳಿಸಲು ಭಾರತೀಯ ರೆಡ್‌ಕ್ರಾಸ್ ಸಂಸ್ಥೆಯು ಸಾಫ್ಟ್‌ವೇರ್ ಅಭಿವೃದ್ಧಿ ಪಡಿಸಿದೆ.

ಮುಂದುವರೆದು, ಸದರಿ ಶುಲ್ಕವನ್ನು ಭಾರತೀಯ ರೆಡ್‌ಕ್ರಾಸ್ ಸಂಸ್ಥೆ, ಕರ್ನಾಟಕ ರಾಜ್ಯ ಶಾಖೆ ಅಭಿವೃದ್ಧಿ ಪಡಿಸಿರುವ ಸಾಫ್ಟ್‌ವೇರ್ ಮೂಲಕ ಪಾವತಿಸುವ ವಿವರ ಈ ಕೆಳಗಿನಂತಿವೆ:-

- ಮೊದಲು ಗೂಗಲ್‌ನಲ್ಲಿ – https://redcrosskarnataka.org/ ಎಂದು ನಮೂದಿಸಬೇಕು.
- ನಂತರ ಭಾರತೀಯ ರೆಡ್‌ಕ್ರಾಸ್ ಸಂಸ್ಥೆ, ಕರ್ನಾಟಕ ರಾಜ್ಯ ಶಾಖೆಯ ಅಧಿಕೃತ ವೆಬ್‌ಸೈಟ್ ತೆರೆದುಕೊಳ್ಳುತ್ತದೆ.
- ಬಲ ಮೇಲ್ಭಾಗದಲ್ಲಿರುವ Youth Red Cross Registration ಎಂಬ ಆಯ್ಕೆಯ ಮೇಲೆ ಕ್ಲಿಕ್ ಮಾಡಬೇಕು.
- ನಂತರ ಅರ್ಜಿ ನಮೂನೆ ತೆರೆದುಕೊಳ್ಳುತ್ತದೆ, ಇಲ್ಲಿ ತಮ್ಮ ಕಾಲೇಜಿನ AISHE (All India Survey of Higher Education) OR UUCMS (Unified University College Management System) ಸಂಖ್ಯೆ/ಕೋಡ್ ಅನ್ನು ನಮೂದಿಸಬೇಕು.
- ಸಂಖ್ಯೆ ನಮೂದಿಸಿದ ನಂತರ ಕೀಬೋರ್ಡ್‌ನಲ್ಲಿ Enter ಒತ್ತಬೇಕು.
- ನಿಮ್ಮ ಕಾಲೇಜಿನ ಹೆಸರು ಮತ್ತು ಇನ್ನಿತರ ಮಾಹಿತಿಗಳು ಸ್ವಯಂ ಭರ್ತಿಯಾಗುತ್ತದೆ ( Auto Populate)
- ನಂತರ ಅರ್ಜಿ ನಮೂನೆಯಲ್ಲಿ ಕೇಳಿರುವ ಎಲ್ಲಾ ಮಾಹಿತಿಗಳನ್ನು ಕಡ್ಡಾಯವಾಗಿ ಭರ್ತಿ ಮಾಡಬೇಕು.
- ಈಗಾಗಲೇ ತಮ್ಮ ಕಾಲೇಜು ನೋಂದಣಿಯಾಗಿದ್ದರೆ Already Registered ಎಂಬ ಆಯ್ಕೆಯನ್ನು ಆಯ್ಕೆ ಮಾಡಬೇಕು.
- ನೋಂದಣಿಯಾಗಿರದಿದ್ದರೆ Not Registered ಎಂಬ ಆಯ್ಕೆಯನ್ನು ಆಯ್ಕೆ ಮಾಡಬೇಕು. ಆಯ್ಕೆ ಮಾಡಿದ ನಂತರ ಸ್ವಯಂ ನೋಂದಣಿ ಶುಲ್ಕ ರೂ. 1,500/- ಸೇರಿಕೊಳ್ಳುತ್ತದೆ.